Regdo B G. 155

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು:— ಅಂಮನೆ ಸಿಂಸ್ಕೆದಾರ್ ಎಂ ವಿ ಸುಬ್ಬಂಕಾಯರು

31—7—1964

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ಕಪ್ಪದ್ದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

[2 ನ ಪೈ

ಮೈಸೂರಿನಲ್ಲಿ ನೀರು ನಿಲ್ಲುತ್ತದೆ

ವಿದ್ಯುಚ್ಛಕ್ತಿಯ ಸಂಬಂಧವಾಗಿ ಕಾರಣಾಂತರದಿಂದ ನಿಲ್ಲುವ ಪ್ರಯುಕ್ತ 2-8-1964 ನೇ ಭಾನುವಾರ ಬೆಳಿಗ್ಗೆ 11 ಘಂಟೆಯ ಅನಂತರ ಸಾಯಂಕಾಲ 4 ಘಂಟೆಯವರೆಗೆ ನೀರಿನ ಸಂಬಂಧವು ನಿಲ್ಲಿಸಲಾಗುತ್ತೆ ; ಆದ್ದರಿಂದ ಪುರವಾಸಿಗಳು ಸಾಕಷ್ಟು ನೀರನ್ನು ಮುಂಗಡವಾಗಿ ಶೇಖರಿಸಿಟ್ಟುಕೊಳ್ಳಬೇಕಾಗಿ ಈ ಮೂಲಕ ತಿಳಿಯಪಡಿಸಿರುತ್ತೆ — ಎಂಬುದಾಗಿ ಮುನಿಸಿಪಲ್ ಕಮಿಷನರವರು ಪ್ರಕಟಣೆ ಹೊರಡಿಸಿದ್ದಾರೆ

ಸಂಕಟಕ್ಕೊಳಗಾದ ಹುಡುಗಿಯರು

ಫ್ಲಾರೆನ್ಸ್ — ಒಬ್ಬ ಮೋಟಾರು ನಡೆಸುತ್ತಿದ್ದವನು ದಾರಿಯಲ್ಲಿ ಕಂಡ ಇಬ್ಬರು ಹುಡುಗಿಯರಿಗೆ ತನ್ನ ಕಾರಿನಲ್ಲಿ ಸ್ಥಳ ಕೊಟ್ಟು ದೂರ ಹೋದನಂತರ ಕಾರನ್ನು ನಿಲ್ಲಿಸಿ ಪಿಸ್ತೂಲು ಹಿಡಿದುಕೊಂಡು ಹುಡುಗಿಯರನ್ನು ಬೆದರಿಸಿ ಅವರಲ್ಲಿದ್ದ ಎಲ್ಲಾ ವಸ್ತುಗಳು ಲಗೇಜನ್ನು ಕೊಡಲು ತಿಳಿಸಿ ಅವರು ಹಾಗೇಮಾಡಲು ಅವೆಲ್ಲವನ್ನೂ ತೆಗೆದುಕೊಂಡು ಪರಾರಿಯಾದನು ; ಪೋಲೀಸರು ಅವನನ್ನು ಹುಡುಕುತ್ತಿದ್ದಾರೆ.

ಕೋಟಿಕೋಟಿಗಟ್ಟಿ ಚೆಕ್ಕುಗಳು

ನ್ಯೂಯಾರ್ಕ್ — ಅಮೇರಿಕಾದವರು ಕಳೆದ ವರ್ಷ 15೦೦೦೦೦೦೦೦೦ ಚೆಕ್ಕುಗಳನ್ನು ಬರೆದರು — 1970 ರ ಹೊತ್ತಿಗೆ 28೦೦೦೦೦೦೦೦೦ ಚೆಕ್ಕುಗಳನ್ನು ಬರೆಯುವರೆಂದು ಹೇಳಲಾಗಿದೆ — ಈ ವಿಷಯವನ್ನು 24 ದೇಶಗಳ ಬ್ಯಾಂಕರುಗಳು ಸಮ್ಮೇಳನದಲ್ಲಿ ಚರ್ಚಿಸುತ್ತಿದ್ದಾರೆ.

ಕರ್ನಾಟಕಕ್ಕೆ ಸೇರಲಿ

ಷೋಲಾಪುರ — ಮಹಾರಾಷ್ಟ್ರದ ಕನ್ನಡ ಭಾಷಾ ಮಾತನಾಡುವ ಭಾಗಗಳನ್ನು ಮೈಸೂರಿಗೆ ಸೇರಿಸಲು ಒತ್ತಾಯಮಾಡುವದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಭಾರತ ಗೃಹ ಮಂತ್ರಿ ಶ್ರೀ ನಂದಾರವರಿಗೆ ನಿಯೋಗ ಕಳುಹಿಸಲು ನಿರ್ಧರಿಸಲಾಗಿದೆ.

ಪ್ಲೆಬಿಸೈಟ್ ಗುಂಪಿನ ಸಮ್ಮೇಳನ

ಶ್ರೀ ನಗರ — ಜಮ್ಮು ಕಾಶ್ಮೀರ ಜನಮತ ರಂಗದವರು ನಡೆಸಿದ 4 ದಿನಗಳ ಸಮ್ಮೇಳನದಲ್ಲಿ ಕಾಶ್ಮೀರ ವ್ಯಾಜ್ಯ ಪರಿಹಾರಕ್ಕೆ ಪ್ಲೆಬಿಸೈಟು ಒಂದೇ ಪ್ರಜಾ ಪ್ರಭುತ್ವದ ರೀತಿನೀತಿಯೆಂದೂ ಮತ್ತು ಶಸ್ತ್ರಾಸ್ತ್ರ ಘರ್ಷಣೆ ತಪ್ಪಲು ಇದು ಒಂದೇ ಮಾರ್ಗವೆಂದೂ ನಿರ್ಣಯಿಸಿತು.

★

ಮೈಸೂರು — ಒಬ್ಬ ವರ್ತಕನಿಗೆ ಫೋರ್ಜರಿ ಚೆಕ್ಕನ್ನಿತ್ತ ಅಬ್ದುಲ್ ಹಫೀಜನನ್ನು ಲಷ್ಕರ್ ಪೋಲೀಸರು ಮೊನ್ನೆ ಬಂಧಿಸಿದರು

ಸಿಸಿ — ಇಲ್ಲಿಯ ಟ್ರೆಸ್ಸಿ ಮಕ್ಕಳ ಶಯನ್ಸು ಕಾಲೇಜು ವಿದ್ಯಾರ್ಥಿಗಳು ಸಂಕಾರದ ಫೀಜಿನ ವಿಷಯದ ಶಾಂತಿಪೀತಿಯನ್ನು ಪ್ರತಿಭಟಿಸಿ ಮೊನ್ನೆ ಮುಷ್ಕರ ಹೂಡಿ ಮೆರವಣಿಗೆ ನಡೆಸಿದರು.

ಮದರಾಸು — ಆಹಾರ ದಾಸ್ತಾನು ಮಾಡವರು ಅದನ್ನು ಸರಕಾರಕ್ಕೆ ವಿನಃ ಮತ್ತಾರಿಗೂ ಮಾರದಂತೆ ಪ್ರತಿಬಂಧಿಸುವ ಶಾಸನವಾಗಬೇಕೆಂದು ಕೇಂದ್ರ ಮಂತ್ರಿ ಕೃಷ್ಣಮಾಚಾರ್ಯರು ಹೇಳಿದರು.

ಮುಷ್ಕರ

ಮೈಸೂರು — ನಿನ್ನೆ ಸೆಂಟ್ ಫಿಲೊಮಿನಾ ಕಾಲೇಜ, ಬನುಮಯ್ಯ ಕಾಲೇಜು ವಿದ್ಯಾರ್ಥಿಗಳು ಖಾಸಗೀ ಕಾಲೇಜುಗಳಲ್ಲಿ ಫೀಜು ಕಡಮೆ ಮಾಡದಿರುವುದನ್ನು ಪ್ರತಿಭಟಿಸಿ ಮುಷ್ಕರ ಹೂಡಿ ಘೋಷಣೆಗಳನ್ನು ಮಾಡುತ್ತಾ ಮೆರವಣಿಗೆ ನಡೆಸಿದರು.

★

ಅಕ್ಕಿಗೆ ಕಾರ್ಡ್

ಹೈದರಾಬಾದು — ಹೈದರಾಬಾದು ನಗರದಲ್ಲಿ 1-35 ಲಕ್ಷ ಸಂಸಾರಂಗಳಿಗೆ ವಾರಕ್ಕೆ 1೮ ರಿಂದ 14 ಕಿಲೋಗ್ರಾಂ ಅಕ್ಕಿ ಕೊಡಲು ಗುರ್ತು ಕಾರ್ಡುಗಳನ್ನು ಕೊಡಲು ಸರಕಾರ ನಿರ್ಧರಿಸಿದೆ ; 250 ಫೇರ ಪ್ರೈಜು ಡಿಪೋಗಳ ಮೂಲಕ ಹಂಚಲಾಗುವುದು : ಸಕ್ಕರೆ ಹಂಚಿಕೆಗೂ ಈ ಪದ್ಧತಿ ಅನುಸರಿಸಲಾಗುವುದು

★

ಶ್ರೀಮನ್ಮಹಾರಾಜರು

ಮೈಸೂರು ಶ್ರೀಮನ್ಮಹಾರಾಜರವರು ನಾಳೆ ರಾಮೇಶ್ವರಕ್ಕೆ ತೆರಳುವರೆಂದು ತಿಳಿಯಬಂದಿದೆ.

ಕಾರ್ಮಿಕರ ಕೇಳಿಕೆ

ಬೆಂಗಳೂರಿನಲ್ಲಿ ನಡೆಯುತ್ತಿದ್ದ 2ದಿನಗಳ ಕಾರ್ಮಿಕ ಸಮ್ಮೇಳನ ಮುಕ್ತಾಯವಾಯಿತು : ಆಹಾರ ಬೆಲೆ ಏರಿಕೆ ಶಾಂತೀಕರಿಸಲೆಯಾಯಿತು : ಅಕ್ಕಿ ಮುಂತಾದ ಧಾನ್ಯ ಹಾಗೂ ಬಟ್ಟೆಯನ್ನು ವೇತನ ರೂಪದಲ್ಲಿ ಕೊಡಬೇಕೆಂದು ನಿರ್ಣಯವಾಯಿತು.

——

ಶಾಲೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರವರಿಂದ
1 ಶನಿವಾರ ಅಷ್ಟಮಿ ಘಂಟೆ

ಮುಖ್ಯ ಮಂತ್ರಿಗಳಿಗೆ ಸೂಚನೆ

ನವದೆಹಲಿ — ಬೆಲೆ ಏರದಂತೆ ತಡೆಯಲು ಮಾಡಬೇಕಾದ ನಿರ್ದಿಷ್ಟ ಕಾರ್ಯಗಳನ್ನು ಮುಖ್ಯ ಮಂತ್ರಿಗಳಿಗೆ ಪ್ರಧಾನಿಗಳು ಕ್ಷಿಪ್ರದಲ್ಲೇ ಸೂಚಿಸಲಿರುವರು.

★

ತಾಜಾ ಸಮಾಚಾರ

ಗುಲ್ಬರ್ಗ — ಹತ್ತಿಕೋಡಿ ಗ್ರಾಮದಲ್ಲಿ ಒಂದು ಗುಂಪಿನವರು ಒಂದು ದೇವಸ್ಥಾನದ ಪಕ್ಕದಲ್ಲಿ ಪಾಣಿಬಲಿ ಕೊಡಲು ಏರ್ಪಡಿಸಿದ್ದರು ; ಅಡಚಣೆಪ್ಪಿಸಲು ಬಂದ ಪೋಲೀಸರನ್ನು ಹೊಡೆದು ಗಾಯಪಡಿಸಿದರು : ಹೆಚ್ಚಿನ ಪೋಲೀಸರು ಆ ಪ್ರದೇಶದಲ್ಲಿ ಸನ್ನದ್ಧ.

ವಿಶ್ವಸಂಸ್ಥೆ — ಫೆಬ್ರವರಿ 21 ರಂದು ಪಾಕಿಸ್ತಾನ ಸೈನ್ಯ ಕಾಶ್ಮೀರದಲ್ಲಿ ಕದನ ಸ್ತಂಭ ರೇಖೆಯನ್ನು ಉಲ್ಲಂಘಿಸಿದ್ದಾಗಿ ಪಾಕಿಸ್ತಾನ ಒಪ್ಪಿದೆ.

ಮದರಾಸು — ಹಿಂದೀ ಮಾತೃಭಾಷೆಯಲ್ಲದಂತಹ ಹಿಂದೀ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಸ್ಕೀಮನ್ನು ಭಾರತ ಸರಕಾರ ಪ್ರಕಟಿಸಿದೆ

ಜಮ್ಮು — ಪೂಂಛಿನಿಂದ ಪಾಕಿಸ್ತಾನಿ ರಜಾಕಾರರಿಗೂ ಮತ್ತು ಭಾರತ ಸೈನಿಕರಿಗೂ ಗುಂಡಿನ ಹೊಡೆದಾಟ ಮೊನ್ನೆ ನಡೆದು, ಒಬ್ಬ ರಜಾಕಾರನು ಮಡಿದನೆಂದು ವರದಿಯಾಗಿದೆ

ಜೂನ್ ಕಡೆಯ ವಾರದಲ್ಲಿ ಪಾಕಿಸ್ತಾನವು ಕಾಶ್ಮೀರ ಕದನ ರೇಖೆಯನ್ನು 5 ಬಾರಿ ಉಲ್ಲಂಘನೆ ಮಾಡಿದೆಯೆಂದು ವಿಶ್ವಸಂಸ್ಥೆ ಸೇನಾನಿರೀಕ್ಷಕರು ಒಪ್ಪಿದಾರೆ

ಬೊಂಬಾಯಿ — ಪ್ರವಾಸಿಕರಿಗೆ ತಿಂಗಳಿಗೆ 4 ಯೂನಿಟ್ಟಿಗೆ ಬದಲು 6 ಯೂನಿಟ್ಟು ವಿದ್ಯುದ ಕೋಟಾ ಕೊಡಲು ಭಾರತ ಸರಕಾರ ನಿರ್ಧರಿಸಿದೆ.

ಅಮೇರಿಕಾದಿಂದ 3 ತಿಂಗಳಲ್ಲಿ ಭಾರತಕ್ಕೆ 4 ಲಿಯು ಬುಷಲ್ ಗೋಧಿ ಬರುವುದು

ವಿವಿಧ ವಿಷಯಗಳು

ಕೊಯಮತ್ತೂರು— ಡಿ ಎಂ ಕೆ ಯುವರ ಹಿಂದೀ ವಿರುದ್ಧ ಚಳವಳಿಯಲ್ಲಿ ಕೇಂದ್ರ ಶಂತೀ ಕಚೇರಿ ಪಿಕೆಟ್ ಮಾಡಿದ ಸಂಬಂಧವಾಗಿ ಮೊನ್ನೆ 150 ಮಂದಿ ದಸ್ತಗಿರಿ ಮಾಡಲ್ಪಟ್ಟರು.

ಜಯಪುರ— ರಾಜ್ಯದ ಉಚೆ ಸ್ಥಾಗಿಸಲು ಮೂರು ಮಂದಿ ವರ್ತಕರು ಪ್ರಯತ್ನಿಸಿದ್ದ, 450 ಚೀಲ ಆಹಾರಾಧಾನ್ಯಗಳನ್ನು ಪೋಲೀಸರು ವಶಪಡಿಸಿಕೊಂಡು ಆ ಮೂರು ಮಂದಿ ವರ್ತಕರನ್ನು ದಸ್ತಗಿರಿ ಮಾಡಿದರು.

ಮದಂತಸು— ರಾಜಾಜಿಯವರ ಮಗಳು ನಾಮಗಿರಿಯನ್ನು ಕೊಲೆ ಮಾಡಲು ಪ್ರಯತ್ನಿಸಿದ ದರ್ಜಿ ನಾಮರಾವಿಗೆ 4 ವರ್ಷ ಕಠಿಣ ಸಜೆ ವಿಧಿಸಲಾಯಿತು.

ನವದೆಹಲಿ— ಏರುತ್ತಿರುವ ಬೆಲೆಯನ್ನು ಸರಕಾರ ಹತೋಟಿಗೆ ತಂದಿರುವುದನ್ನು ಪ್ರತಿಭಟಿಸಿ 600 ಮಂದಿ ಜನಸಂಘದವರು ಉಪವಾಸ ಮಾಡಿದರು.

ವಿಶ್ವಸಂಸ್ಥೆ— ರಕ್ಷಣಾ ಸಮಿತಿ ಅಧ್ಯಕ್ಷರಿಗೆ ಪಾಕಿಸ್ತಾನದ ಹಂಗಾಮಿ ಮುಖ್ಯ ಪ್ರತಿನಿಧಿಗಳು ಕೊಟ್ಟ ಅರ್ಜಿಯಲ್ಲಿ, ಭಾರತವು ಕಾಶ್ಮೀರ ಯುದ್ಧಸ್ಥಂಭ ರೇಖೆಯ ಮತ್ತ, ಪಾಕ-ಭಾರತದ ಒಪ್ಪಂದವನ್ನು ತೀವ್ರ ಉಲ್ಲಂಘಿಸಿದೆಯೆಂದು ತಿಳಿಸಿರುವರು : ಇದನ್ನು ವಿಶ್ವಸಂಸ್ಥೆಯ ಎಲ್ಲ ಸದಸ್ಯರಿಗೂ ತಿಳಿಸಲಾಗಿದೆ

ನಾಗಾಲಾಂಗು— ನಾಗಾಲಾಲ್ಯಾಂಡಿನೀದ ರೆ || ಮೈಕೇಲ ಸಾಕ್ಕಟನ ನ್ನು ಹೊಡೂಡಬೇಕೆಂದು ಮುದರಾಸಿನ ಮಾಜಿ ಗವರ್ನರು ಶ್ರೀ ವಿಷ್ಣುರಾಂ ಮೇಹಡಿ ಕೇಳಿಕೆ ಮಾಡಿರುವರು.

Please Add

In the City Municipal Council, Mysore, Notification published in our issue of the 29 th inst, in the last page, in clause 18— in 1 st line, after shops, please add " or portions of shops "

Help The ' Gorakshana '

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

*

— ' ಗೋರಕ್ಷಣ ' ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಕ್ಕೆ ಚಂದಾ ಸಹಾಯದ್ರವ್ಯ ಮುಂತಾದ್ದನ್ನು ಸ್ವೀಕರಿಸುವವರು :

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಡಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು
ಶ್ರೀ ಅನಂತ ನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರ ಸಭಾ, ಹೊಂಗನೂರು

ಆಪೆರಾ— ಜನಭರಿತ 3 ನೇ ವಾರ

ತುಂಬಿದ ಕೊಡ

ಪಾತ್ರ— ರಾಜಕುಮಾರ್, ಲೀಲಾವತಿ, ಬಾಲಕೃಷ್ಣ, ನರಸಿಂಹರಾಜು, ಜಯಂತಿ
ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಸ್ವತಂತ್ರ ಪಕ್ಷ (ಮೈಸೂರು ರಾಜ್ಯ)

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿರುವ ಸ್ವತಂತ್ರ ಪಕ್ಷದ ಹಿತೈಷಿಗಳಿಗೆ ಎಚ್ಚರಿಕೆ

ಸ್ವತಂತ್ರ ಪಕ್ಷ, ಮೈಸೂರು ನಗರ ಮತ್ತು ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಹೆಚ್. ಎಸ್. ಚಂದ್ರಶೇಖರಂರವರು ತಾ|| 23-7-64 ರ ಸತ್ಯವಾದಿ, ತಾ|| 23-7-64 ರ ವರ್ತಮಾನ್ ಮತ್ತು ತಾ|| 24-7-64 ರ ಸಾಧ್ವಿ ದಿನಪತ್ರಿಕೆಗಳಲ್ಲಿ ಇತ್ತೀಚಿನ ಎಚ್ಚರಿಕೆಯು ಮತ್ತು ತಾ|| 26-7-64 ರ ಸ್ವತಂತ್ರದರ್ಶಿ ವಾರಪತ್ರಿಕೆಯು ಮೊದಲನೆಯ ಪುಟದಲ್ಲಿ ಆ ಪತ್ರಿಕೆಯು ಸಂಪಾದಕರು ಪ್ರಕಟಣೆ ಮಾಡಿರುವ ಹೇಳಿಕೆಯು ಮೈಸೂರು ರಾಜ್ಯ ಸ್ವತಂತ್ರ ಪಕ್ಷದ ಕಾರ್ಯಕಾರಿ ಸಮಿತಿಯ ಗಮನಕ್ಕೆ ಬಂದಿರುತ್ತೆ. ಸಾರ್ವಜನಿಕರ ಮನಸ್ಸಿನಲ್ಲಿ ಉಟ್ಟಾಗಿರಬಹುದಾದ ತಪ್ಪಾದ ಭಾವನೆಗಳನ್ನೆಲ್ಲವನ್ನೂ ತೊಡೆದುಹಾಕಲು ಈ ಕೆಳಗೆ ಕಂಡ ಸತ್ಯಾಂಶಗಳನ್ನು ರಾಜ್ಯ ಸ್ವತಂತ್ರ ಪಕ್ಷದ ಕಾರ್ಯಕಾರಿ ಸಮಿತಿ ಒತ್ತಿಹೇಳಲು ಇಚ್ಛಿಸುತ್ತದೆ—

1 ಶ್ರೀ ಹೆಚ್ ಎಸ್ ಚಂದ್ರಶೇಖರಂರವರು ಪ್ರಕಟಿಸಿರುವ ಹೇಳಿಕೆಯಲ್ಲಿರುವ ಎಲ್ಲ ವಿಷಯಗಳೂ ಸರಿಯಾಗಿವೆ. 2 ಅಖಿಲ ಭಾರತ ಸ್ವತಂತ್ರಪಕ್ಷದ ಕೇಂದ್ರ ಸಂಘಟನಾ ಸಮಿತಿಯಿಂದ ಮೈಸೂರು ರಾಜ್ಯ ಸ್ವತಂತ್ರ ಪಕ್ಷದ ಅಡಳಿತ ಜವಾಬ್ದಾರಿ ಹೊಂದಿದವರು ಮೇಲೆ ಸ್ವತಂತ್ರದರ್ಶಿ ಸಂಪಾದಕರು ತಮ್ಮ ಕಾಲಂಗಳಲ್ಲಿ ನಿಂದನೆಯು ಅಸಹ್ಯ ಪ್ರಚಾರ ಮಾಡುತ್ತಿರುವುದನ್ನು ಆ ವಾರ ಪತ್ರಿಕೆಯ ಓದುಗರು ತಿಳಿದಿರುವ ವಿಷಯವಾಗಿದೆ ಅಂಥಹ ಪತ್ರಿಕೆಯು ಸಂಪಾದಕರು ಸ್ವತಂತ್ರ ಪಕ್ಷದ ಬೋನಾಫೈಡ್ ಕಾರ್ಯಕರ್ತರನ್ನು ಸೇರಿಸುವುದರಲ್ಲಿ ಯಾವ ಪಾತ್ರವನ್ನೇ ಅಗಲಿ ಅಥವಾ ಜವಾಬ್ದಾರಿಯನ್ನಾಗಲಿ ಖಂಡಿತಾ ಹೊಂದಲಾಗುವುದಿಲ್ಲ 3 ಪಕ್ಷದ ರಾಜ್ಯ ಕಚೇರಿಯಿಂದ ಸ್ವತಂತ್ರದರ್ಶಿ ಸಂಪಾದಕರಿಗೆ ಕಾರ್ಯಕರ್ತರನ್ನು ಸೇರಿಸಲು ಅಧಿಕೃತ ಫಾರಂಗಳನ್ನು ಸರಬರಾಜು ಮಾಡಿಲ್ಲ ಅವರು ಕಚೇರಿಯಲ್ಲಿ ಯಾರೇ ಅಗಲಿ ಪಕ್ಷದ ಸದಸ್ಯರಾಗಿ ಸೇರಿದರೆ ರಾಜ್ಯಪಕ್ಷ ಹೊಂದಿರುವ ರಿಜಿಸ್ಟರ್‌ನಲ್ಲಿ ಅವರ ಹೆಸರು ಸೇರಿಸುವುದಿಲ್ಲ. 4 ರಾಜಾಜಿಯವರಿಂದ ಸ್ಥಾಪಿಕವಾದ ಸ್ವತಂತ್ರ ಪಕ್ಷದ ಹಾಲಿ ಸದಸ್ಯರಾಗಿ ' ಸ್ವತಂತ್ರದರ್ಶಿ ' ಸಂಪಾದಕರು ಇಲ್ಲ ಇಂಗ್ಲೀಷು ವಾರಪತ್ರಿಕೆ ' ಸ್ವರಾಜ್ಯ ' ದಲ್ಲಿ ಪ್ರಕಟವಾಗುವ ರಾಜಾಜಿಯವರ ಲೇಖನಗಳನ್ನು ಭಾಷಾಂತರಿಸಿ, ಅವರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ ಮಾತ್ರಕ್ಕೆ, ಅವರು ಪತ್ರಿಕೆಗೆ ಸ್ವತಂತ್ರ ಪಕ್ಷದ ಬೆಂಬಲವಿದೆಯೆಂದು ಅರ್ಥವಲ್ಲ.

ಬೆಂಗಳೂರು
29-7-64

(ಸಹಿ) ವಿ. ಟಿ ಶ್ರೀನಿವಾಸ್
ಪ್ರಧಾನ ಕಾರ್ಯದರ್ಶಿ, ಕಾರ್ಯಕಾರಿ ಸಮಿತಿ
ಸ್ವತಂತ್ರ ಪಕ್ಷ (ಮೈಸೂರು ರಾಜ್ಯ)

ವುಡ್‌ಲ್ಯಾಂಡ್ಸ್ ಅಮೋಘ 3 ನೇ ವಾರ

ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿದೆ

ಶಿಕಾರಿ ★ SHIKARI

ರಾಗಿಣಿ, ಹೆಲೆಕ್, ಅಜಿತ್, ಕೆ ಎಸ್ ಸಿಂಗ್, ಟೈಟರ್ ಅಭಿನಯಿಸಿರುವ
ರೋಮಾಂಚಕ ಸನಿವೇಶಗಳಿಂದ, ನೃತ್ಯ ಸಂಗೀತಗಳಿಂದ ಕೂಡಿದ
ಈಸ್ಟ್‌ಮನ್ ಕಲರಿನ ಹಿಂದಿ ಚಿತ್ರ .... [ದಿನವಹಿ 3 ಪ್ರದರ್ಶನಗಳು]

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4

Articles of Association

OF

THE SATYAVADI LIMITED

MYSORE

1 The Regulations of the Company shall be those contained in Table A in the First Schedule of the Mysore Companies Act VIII of 1917, subject to the following additions and modifications:—

2 The name of the Company is " The Satyavadi Limited ".

3 The Registered office of the Company shall be in Mysore State, and the business of the Company shall be carried on in Mysore State or outside as is found necessary by the Directors.

4 (a) The authorised Capital of the company is Rs. 20,000, divided into 4,000 shares of Rs. 5, each (payable in equal instalments, viz,, Re. 1/- on application, Re. 1/- on allotment, and the balance in 3 monthly instalments of Re. 1/- each from one month after allotment. The Present Issue is 1,000 shares.

(b) The minimum subscription upon which the Company may proceed to allotment shall be 100 shares.

(c) The business of the Company may be commenced soon after incorporation, as the Directors may determine.

5 (a) The management of the Company shall, subject to the supervision of the Board of Directors, be vested in Mr. M. S. Krishna Rao. the Secretary, as per clause in the Memorandum.

6 The Secretary shall look after the business of the Company in all its aspects.

7 The Number of Directors of the Company shall be not less than three, and not more than seven.

(b) The First Directors of the Company shall be the following, with power to co-opt up to the maximum.

1 K. P. Puranik
2 S. R. Sastry, B. A.
3 N. Sivaram
4 D. Sreenivasa Setty
5 M. S. Krishna Rao (Ex-officio)
6 G. R. Ramiah

(e) The qualification of a Director shall be his holding not less than 10 shares in his own name.

(d) The remuneration of every Director shall not exceed at any time, Rs. 5/- [exclusive of travelling and halting allowances to Directors from out-stations]

8 Every member shall have one vote.

9 All or any of these Articles of the Company subject to the provisions of the Mysore Companies Act VIII of 1917, may be recinded, altered, added to, or any part of the Article deleted, by a Special Resolution.